# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ಡಿಸೆಂಬರ್ ೨೦, ೨೦೨೩ರ ಬುಧವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೩ನೇ ತುರ್ತು ಸಭೆಯ ನಡೆವಳಿಗಳು

| | |
|---|---|
| ೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೩. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೭. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

| | |
|---|---|
| ೦೮. ಡಾ. ವಿಜಯ್ ಪೂಣಚ್ಚ ತಂಬಂಡ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ೦೩.೧೦.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೧ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೦೩.೧೦.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೧ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ೦೩.೧೦.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೧ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೦೩.೧೦.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೧ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

**ವಿಷಯ** : ೨೦.೧೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೨ನೇ ತುರ್ತು ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೩)

**ನಿರ್ಣಯ** : ದಿನಾಂಕ ೨೦.೧೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೨ನೇ ತುರ್ತು ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ೨೦.೧೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೨ನೇ ತುರ್ತು ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೪)

**ನಿರ್ಣಯ** : ದಿನಾಂಕ ೨೦.೧೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೨ನೇ ತುರ್ತು ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

೨೨೩.೦೧ ದಿನಾಂಕ ೩೧.೧೦.೨೦೨೩ರಂದು ನಡೆದ ಸಿ.ಎ.ಎಸ್. ಆಯ್ಕೆ ಸಮಿತಿ ಸಭೆ ನಡವಳಿಗಳ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯ, ಸಮಾಜ ವಿಜ್ಞಾನಗಳ ನಿಕಾಯ ಹಾಗೂ ಲಲಿತ ಕಲೆಗಳ ನಿಕಾಯಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರ (ಹಂತ–೧೪) ಹುದ್ದೆಯಿಂದ ಹಿರಿಯ ಪ್ರಾಧ್ಯಾಪಕರ (ಹಂತ–೧೫) ಹುದ್ದೆಗೆ, ಸಹ ಪ್ರಾಧ್ಯಾಪಕರ (ಹಂತ–೧೩ಎ) ಹುದ್ದೆಯಿಂದ ಪ್ರಾಧ್ಯಾಪಕರ (ಹಂತ–೧೪) ಹಾಗೂ ಸಹಾಯಕ ಪ್ರಾಧ್ಯಾಪಕರ (ಹಂತ–೧೦) ಹುದ್ದೆಯಿಂದ ಹಿರಿಯ ಶ್ರೇಣಿ ಸಹಾಯಕ ಪ್ರಾಧ್ಯಾಪಕರ (ಹಂತ–೧೧) ಹುದ್ದೆಗೆ ಹಾಗೂ ಉಪ ಗ್ರಂಥಪಾಲಕರ (ಹಂತ–೧೩ಎ) ಹುದ್ದೆಯಿಂದ ಉಪ ಗ್ರಂಥಪಾಲಕರ (ಹಂತ–೧೪) ಹುದ್ದೆಗೆ ಸಂಬಂಧಿಸಿದಂತೆ ನಡೆದ ಸಿ.ಎ.ಎಸ್. ಆಯ್ಕೆ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೩೧.೧೦.೨೦೨೩ರಂದು ನಡೆದ ಸಿ.ಎ.ಎಸ್. ಆಯ್ಕೆ ಸಮಿತಿ ಸಭೆ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೨೩.೦೨ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಲು ವಿಜಯನಗರ ಜಿಲ್ಲೆ, ಹೊಸಪೇಟೆ ನಗರದಲ್ಲಿ ಕನ್ನಡ ವಿಶ್ವವಿದ್ಯಾಲಯವು ಹೊಂದಿರುವ ಜಾಗದಲ್ಲಿ ಪ್ರಾದೇಶಿಕ ಕೇಂದ್ರವನ್ನು ತೆರೆಯಲು ಅನುಕೂಲವಾಗುವಂತೆ ಜಾಗವನ್ನು ಮಂಜೂರು ಮಾಡಿಕೊಡುವಂತೆ ಕೋರಿ ದಿನಾಂಕ ೧೬.೧೧.೨೦೨೩ರಂದು ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಕುಲಸಚಿವರು ಬರೆದ ಪತ್ರದ ಕುರಿತು.

ಟಿಪ್ಪಣಿ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು ದಿನಾಂಕ ೧೬.೧೧.೨೦೨೩ರ ಪತ್ರದ ಮೂಲಕ ವಿಜಯನಗರ ಜಿಲ್ಲೆ ಹೊಸಪೇಟೆ ನಗರದಲ್ಲಿ ಕನ್ನಡ ವಿಶ್ವವಿದ್ಯಾಲಯವು ಹೊಂದಿರುವ ಜಾಗದಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ತೆರೆದು ವಿಜಯನಗರ ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶದ ಭಾಗಗಳ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ದೂರಶಿಕ್ಷಣವನ್ನು ನೀಡಲು ಸದರಿ ಉದ್ದೇಶಕ್ಕೆ ವಿವಿಯ ಕೋರ್ಸ್‌ಗಳಿಗೆ ತರಗತಿಗಳನ್ನು ನಡೆಸಲು, ಪರೀಕ್ಷೆಗಳನ್ನು ಹಮ್ಮಿಕೊಳ್ಳಲು ಮತ್ತು ವಿವಿಯ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ತೆರೆಯಲು ಅನುಕೂಲವಾಗುವಂತೆ ಜಾಗವನ್ನು ಮಂಜೂರು ಮಾಡಿಕೊಡುವಂತೆ ಕೋರಿರುತ್ತಾರೆ. ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು ಮಾಡಿರುವ ಮನವಿಯಂತೆ ಹೊಸಪೇಟೆಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದ ನಿವೇಶನವನ್ನು ಅವರಿಗೆ ನೋಂದಣಿ ಮಾಡಿಕೊಡಲು ಸಾಧ್ಯವಿಲ್ಲ ಎಂದು ಸಭೆಯು ತೀರ್ಮಾನಿಸಿತು. ಕನ್ನಡ ವಿಶ್ವವಿದ್ಯಾಲಯದ ನಿವೇಶನದಲ್ಲೇ ಅವರು ಎಷ್ಟು ವರ್ಷಕ್ಕೆ ಮತ್ತು ಇಷ್ಟು ಭಾಗ ಎಂದು ಪೂರ್ವ ಒಪ್ಪಂದ ಮಾಡಿಕೊಂಡು ಅವರ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಒಪ್ಪಿದರೆ ಆ ರೀತಿ ಕರಾರು ಮಾಡಿಕೊಂಡು ಮುಂದುವರಿಯಲು ಸಭೆಯು ಒಪ್ಪಿಗೆ ಸೂಚಿಸಿತು.

೨೨೩.೦೩ ಡಾ. ವೆಂಕಟಗಿರಿ ದಳವಾಯಿ, ಸಹ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಇವರನ್ನು ಉನ್ನತ ಶಿಕ್ಷಣ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ಹುದ್ದೆಗೆ ಅನ್ಯ ಕಚೇರಿ ಕರ್ತವ್ಯದ ಮೇಲೆ (ಓ.ಓ.ಡಿ) ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮಕ್ಕೆ ಸಭೆಯ ಘಟನೋತ್ತರ ಅನುಮೋದನೆ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ವೆಂಕಟಗಿರಿ ದಳವಾಯಿ ಇವರನ್ನು ಉನ್ನತ ಶಿಕ್ಷಣ ಇಲಾಖೆ ಪತ್ರ ಸಂ. ಇಡಿ ೫ ಕೆವಿವಿ ೨೦೨೩ ದಿನಾಂಕ ೨೨.೦೬.೨೦೨೩ರ ಅಧಿಸೂಚನೆ ಅನ್ವಯ ಉನ್ನತ ಶಿಕ್ಷಣ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ಹುದ್ದೆಗೆ ಅನ್ಯ ಕಚೇರಿ ಕರ್ತವ್ಯದ ಮೇಲೆ(ಓ.ಓ.ಡಿ.) ಸೇವೆಯಿಂದ ಬಿಡುಗಡೆಗೊಳಿಸುವಂತೆ ಸದರಿಯವರು ಸಲ್ಲಿಸಿದ ಮನವಿಯನ್ನು ಪರಿಗಣಿಸಿ ಮಾನ್ಯ ಕುಲಪತಿಗಳು ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಸೇವೆಯಿಂದ ಬಿಡುಗಡೆಗೊಳಿಸಲು ಅನುಮೋದನೆ ನೀಡಿರುತ್ತಾರೆ. ಈ ಘಟನೋತ್ತರ ಅನುಮೋದನೆಯನ್ನು ಸಿಂಧುಗೊಳಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಘಟನೋತ್ತರ ಅನುಮೋದನೆ ನೀಡಿತು.

೨೨೩.೦೪ ಡಾ. ವೆಂಕಟಗಿರಿ ದಳವಾಯಿ, ಸಹ ಪ್ರಾಧ್ಯಾಪಕರು, ಇವರ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿನ ಸಹಾಯಕ ಪ್ರಾಧ್ಯಾಪಕರ ಲೀನ್ ಅವಧಿಯನ್ನು ತೆರವುಗೊಳಿಸುವ ಕುರಿತು.

ಟಿಪ್ಪಣಿ : ಡಾ. ವೆಂಕಟಗಿರಿ ದಳವಾಯಿ, ಸಹ ಪ್ರಾಧ್ಯಾಪಕರು ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಕನ್ನಡ ವಿಶ್ವವಿದ್ಯಾಲಯಕ್ಕೆ ಲೀನ್ ಅವಧಿಯ ಮೇಲೆ ಬಿಡುಗಡೆಗೊಂಡು ಸಹ ಪ್ರಾಧ್ಯಾಪಕರಾಗಿ ದಿನಾಂಕ ೨೮.೦೩.೨೦೧೮ರಂದು ನೇಮಕಾತಿ ಹೊಂದಿ, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯವು ೨೮.೦೩.೨೦೧೮ ರಿಂದ ೨೭.೦೩.೨೦೨೦ರವರೆಗಿನ ಅವರ ಸೇವಾಪೂರ್ವ ಅವಧಿಯನ್ನು ಕನ್ನಡ ವಿಶ್ವವಿದ್ಯಾಲಯ ಸೇವಾ ನಿಯಮಗಳನ್ವಯ ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಿ ದಿನಾಂಕ ೦೯.೦೩.೨೦೨೩ರಂದು ಆದೇಶ ಹೊರಡಿಸಲಾಗಿದೆ.

ಮುಂದುವರಿದು ಡಾ. ವೆಂಕಟಗಿರಿ ದಳವಾಯಿ ಇವರನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ದಿನಾಂಕ ೨೭.೦೩.೨೦೧೮ರಂದು ಸಹ ಪ್ರಾಧ್ಯಾಪಕರಾಗಿ ನೇಮಕಗೊಂಡ ಸೇವೆಯನ್ನು ಪೂರ್ವಾನ್ವಯಗೊಳಿಸುವಂತೆ ಸದರಿಯವರ ನಿವೇದನೆಯ ಸ್ವಯಂವೇದ್ಯ ಪತ್ರವನ್ನು ಪರಿಗಣಿಸಿ ಡಾ. ವೆಂಕಟಗಿರಿ ದಳವಾಯಿ ಇವರನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡ ಹುದ್ದೆಯ ಮೇಲಿನ ಹಕ್ಕನ್ನು ನಿಯಮಾನುಸಾರ ದಿನಾಂಕ ೨೭.೦೩.೨೦೧೮ರಿಂದ ಅನ್ವಯವಾಗುವಂತೆ ಬಿಡುಗಡೆಗೊಳಿಸಿ ಲೀನ್ ಅವಧಿಯನ್ನು ತೆರವುಗೊಳಿಸುವಂತೆ ಈ ಮೂಲಕ ಕೋರಿರುವ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಲೀನ್ ಅವಧಿಯನ್ನು ತೆರವುಗೊಳಿಸುವಂತೆ ಸಭೆಯು ಅನುಮೋದನೆ ನೀಡಿತು.

**೨೨೩.೦೫** ದಿನಾಂಕ ೩೦.೧೦.೨೦೨೩ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಪಠ್ಯ ಪುಸ್ತಕಗಳ ದರನಿಗದಿ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಸ್ನಾತಕೋತ್ತರ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಹಳೆಯ ಪಠ್ಯಪುಸ್ತಕಗಳನ್ನು ಮಾರಾಟ ಮಾಡುವ ಸಂಬಂಧ ದಿನಾಂಕ ೩೦.೧೦.೨೦೨೩ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಪಠ್ಯ ಪುಸ್ತಕಗಳ ದರನಿಗದಿ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ದಿನಾಂಕ ೩೦.೧೦.೨೦೨೩ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಪಠ್ಯಪುಸ್ತಕಗಳ ದರನಿಗದಿ ಸಮಿತಿ ಸಭೆ ನಡೆವಳಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

**೨೨೩.೦೬** ದಿನಾಂಕ ೨೮.೧೧.೨೦೨೩ರಂದು ನಡೆದ ಖರೀದಿ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೨೮.೧೧.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಖರೀದಿ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೩.೦೭** ದಿನಾಂಕ ೦೫.೧೨.೨೦೨೩ರಂದು ನಡೆದ ಕಾಮಗಾರಿ/ಕಟ್ಟಡ ಸಲಹಾ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೦೫.೧೨.೨೦೨೩ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಕಾಮಗಾರಿ/ಕಟ್ಟಡ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೩.೦೮** ದಿನಾಂಕ ೧೧.೧೨.೨೦೨೩ರಂದು ನಡೆದ ೨೦೨೩-೨೪ನೇ ಸಾಲಿನ ಎರಡನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೧೧.೧೨.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೩-೨೪ನೇ ಸಾಲಿನ ಎರಡನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ದಿನಾಂಕ ೧೧.೧೨.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೩-೨೪ನೇ ಸಾಲಿನ ಎರಡನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೩.೦೯** ದಿನಾಂಕ ೧೪.೧೨.೨೦೨೩ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೧೪.೧೨.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೩.೧೦** ದಿನಾಂಕ ೧೨.೧೨.೨೦೨೩ರಂದು ಡಾ. ಅಶೋಕಕುಮಾರ ರಂಜೇರೆ, ಪ್ರಾಧ್ಯಾಪಕರು, ಕನ್ನಡ ಭಾಷಾಧ್ಯಯನ ವಿಭಾಗ, ಇವರು ಸೆಬಾಟಿಕಲ್ ರಜೆ ಕೋರಿ ಸಲ್ಲಿಸಿರುವ ಮನವಿ ಕುರಿತು.

ಟಿಪ್ಪಣಿ : ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಅಶೋಕಕುಮಾರ ರಂಜೇರೆ, ಇವರು 'ಕನ್ನಡ ನಾಟಕ ಮತ್ತು ರಂಗಪರಿಭಾಷೆ' ಎಂಬ ವಿಷಯಕ್ಕೆ ಸಂಬಂಧಿಸಿದ ಯೋಜನೆಯನ್ನು ಕೈಗೊಳ್ಳಲು ಒಂದು ವರ್ಷದ ಅವಧಿಯ ಸೆಬಾಟಿಕಲ್

ರಜೆಗೆ ದಿನಾಂಕ ೧೨.೧೨.೨೦೨೩ರಂದು ಮನವಿಯನ್ನು ಸಲ್ಲಿಸಿದ್ದಾರೆ. ದಿನಾಂಕ ೧೩.೧೦.೨೦೨೩ರ ಕನ್ನಡ ಭಾಷಾಧ್ಯಯನ ವಿಭಾಗದ ಅಧ್ಯಯನ ಮಂಡಳಿ ಸಮಿತಿ ಸಭೆ ಅನುಮೋದನೆ ಮೇರೆಗೆ ಹಾಗೂ ಯುಜಿಸಿ ನಿಯಮಾವಳಿ ೨೦೧೦ರ ಅನ್ವಯ (ದಿ ಗೆಜೆಟಿಯರ್ ಆಫ್ ಇಂಡಿಯಾ ಸೆಪ್ಟಂಬರ್ ೧೮, ೨೦೧೦–ಪಾರ್ಟ್–೩ ಸೆಕ್ಷನ್–೪ ಕಂಡಿಕೆ ೮.೩) ಹಾಗೂ ವಿಶ್ವವಿದ್ಯಾಲಯಗಳ ನಿಯಮಾವಳಿಗಳನ್ವಯ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ನಿಯಮಾನುಸಾರ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಸಭೆ ತೀರ್ಮಾನಿಸಿತು.

೨೨೩.೧೧ ಕನ್ನಡ ವಿಶ್ವವಿದ್ಯಾಲಯದ ಖಾಯಂ ಸಿಬ್ಬಂದಿಯಾದ ಶ್ರೀ ಪಿ.ಎಸ್. ಕರುಣಾಕರ್, ಪ್ರಥಮ ದರ್ಜೆ ಸಹಾಯಕರು, ಬೆಂಗಳೂರು ಪ್ರಾದೇಶಿಕ ಕೇಂದ್ರ ಇವರ ಗೈರು ಹಾಜರಿ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಪ್ರಾಸಾರಾಂಗ, ಪ್ರಾದೇಶಿಕ, ಬೆಂಗಳೂರು ಕಚೇರಿಯಲ್ಲಿ ಪ್ರಥಮದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಪಿ.ಎಸ್. ಕರುಣಾಕರ್ ಇವರ ಬೆಂಗಳೂರು ಪ್ರಾದೇಶಿಕ ಕಛೇರಿಯವರು ಸಲ್ಲಿಸಿದ ದೈನಂದಿನ ಹಾಜರಾತಿಯ ನಕಲು ಪ್ರತಿಯ ಪ್ರಕಾರ **ದಿನಾಂಕ ೦೬.೦೮.೨೦೨೩ರಿಂದ ೨೮.೧೧.೨೦೨೩ರವರೆಗೆ ಒಟ್ಟು ೨೩೨ ದಿನಗಳು ಅನಧಿಕೃತ ಗೈರು ಹಾಜರಾಗಿರುತ್ತಾರೆ.** ಈ ಅವಧಿಯ ನಂತರವು ಸಹ ಕಚೇರಿಗೆ ಹಾಜರಾಗಿರುವುದಿಲ್ಲ. ಈ ಕುರಿತು ಕೆಳಕಂಡಂತೆ ಸದರಿಯವರಿಗೆ ಸೂಚನಾ ಪತ್ರ ಮತ್ತು ಜ್ಞಾಪನ ಪತ್ರಗಳನ್ನು ನೀಡಲಾಗಿದೆ.

೧. ಕಾರಣ ಕೇಳಿ ನೋಟೀಸ್–೧ ಸಂ.ಕವಿಹಂ.ಕುಸ.ನೋಟೀಸ್/೨೦೨೩–೨೪/೯೧೧ ದಿ.೦೮.೦೫.೨೦೨೩

೨. ಕಾರಣ ಕೇಳಿ ನೋಟೀಸ್–೨ ಸಂ. ಕವಿಹಂ.ಕುಸ.ನೋಟೀಸ್/೨೦೨೩–೨೪/೨೪೬ ದಿ.೧೪.೦೬.೨೦೨೩

೩. ಕಾರಣ ಕೇಳಿ ಅಂತಿಮ ನೋಟೀಸ್ ಸಂ.ಕವಿಹಂ.ಕುಸ.ನೋಟೀಸ್/೨೦೨೩–೨೪/೩೯ ದಿ.೧೨.೦೭.೨೦೨೩

೪. ಜ್ಞಾಪನ ಪತ್ರ ಸಂ.ಕವಿಹಂ.ಕುಸ.ನೋಟೀಸ್/೨೦೨೩–೨೪/೩೮೬ ದಿ.೦೩.೦೮.೨೦೨೩

೫. ಜ್ಞಾಪನ ಪತ್ರ ಸಂ.ಕವಿಹಂ.ಕುಸ.ನೋಟೀಸ್/೨೦೨೩–೨೪/೩೧೪೭ ದಿ.೦೩.೧೦.೨೦೨೩

ಜುಲೈ ೨೦೨೩ ರಿಂದ ವೇತನವನ್ನು ತಡೆಹಿಡಿಯಲಾಗಿದೆ ಎಂದು ಜ್ಞಾಪನ ಪತ್ರ ಸಹ ನೀಡಲಾಗಿದೆ. ಸದರಿಯವರು ನೋಟೀಸ್ ಮತ್ತು ಜ್ಞಾಪನ ಪತ್ರಗಳಿಗೆ ಇದುವರೆಗೂ ಯಾವುದೇ ಲಿಖಿತ ವಿವರಣೆಗಳನ್ನು ನೀಡಿರುವುದಿಲ್ಲ.

**ಕೆಸಿಎಸ್‌ಆರ್ ನಿಯಮ ೧೦೮ರಲ್ಲಿ ಗೈರು ಹಾಜರಿ ಕುರಿತು ಕೆಳಕಂಡಂತೆ ನಿಯಮವನ್ನು ಅಳವಡಿಸಿದೆ.**

**[1][೧೦೮. ಸರ್ಕಾರವು, ಸಂದರ್ಭದ ವಿಶೇಷ ಸನ್ನಿವೇಶಗಳನ್ನು ಗಮನಿಸಿ ಅನ್ಯಥಾ ನಿರ್ಧರಿಸಿದ ಹೊರತು, ರಜೆಪಡೆಯದೆ [3][ನಾಲ್ಕು ತಿಂಗಳು ಅಥವಾ ಅದಕ್ಕೂ ಹೆಚ್ಚು ಅವಧಿಯವರಿಗೆ] ಕರ್ತವ್ಯದಿಂದ ಗೈರುಹಾಜರಾಗಿರುವ ಅಧಿಕಾರಿಯು [4][ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ, ೧೯೫೭ರಲ್ಲಿ ವಿಧಿಸಲಾದ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ] ವಜಾ ಮಾಡುವುದಕ್ಕೆ ಅಥವಾ ತೆಗೆದುಹಾಕುವುದಕ್ಕೆ ಗುರಿಯಾಗಬಹುದು.]**

ಕನ್ನಡ ವಿಶ್ವವಿದ್ಯಾಲಯ ಪರಿನಿಯಮ ಮತ್ತು ಕೆಸಿಎಸ್‌ಆರ್ ನಿಯಮ ಹಾಗೂ ಇಂತಹ ಪ್ರಕರಣಗಳಲ್ಲಿ ಸಿಬ್ಬಂದಿಗೆ ಈ ಹಿಂದೆ ಕನ್ನಡ ವಿಶ್ವವಿದ್ಯಾಲಯ ಅನುಸರಿಸಿದ ಶಿಸ್ತುಕ್ರಮಗಳ ನಿದರ್ಶನಗಳಂತೆ ವಿಚಾರಣಾ ಸಮಿತಿಯನ್ನು ರಚಿಸುವ ಕುರಿತು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಖಾಯಂ ಸಿಬ್ಬಂದಿಯಾದ ಶ್ರೀ ಪಿ.ಎಸ್. ಕರುಣಾಕರ್, ಪ್ರಥಮ ದರ್ಜೆ ಸಹಾಯಕರು ಇವರ ಗೈರು ಹಾಜರಿ ಕುರಿತು ಸಭೆಯು ಚರ್ಚಿಸಿ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಉಪಕುಲಸಚಿವರು (ಆಡಳಿತ) ಅವರನ್ನು ಹೊಂದಿರುವ ವಿಚಾರಣಾ ಸಮಿತಿಯನ್ನು ರಚಿಸಲು ಸಭೆ ತೀರ್ಮಾನಿಸಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**೨೨೩.೧೨** ದಿನಾಂಕ ೦೪.೧೨.೨೦೨೩ರಂದು ನಡೆದ ಕೆಲವು ಅಧ್ಯಾಪಕರ ಸೇವಾಪೂರ್ವ ಅವಧಿ ಘೋಷಣೆ ಮತ್ತು ಇತರೆ ಸಂಬಂಧಿತ ಪರಿಶೀಲನಾ ಉಪಸಮಿತಿ ಸಭೆಯ ವರದಿ ಮತ್ತು ನಂತರದ ಪ್ರಕ್ರಿಯೆಗಳಿಗೆ ಅನುಮೋದನೆ ಕುರಿತು.

ಟಿಪ್ಪಣಿ : ಡೀನ್, ಭಾಷಾನಿಕಾಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ ೦೪.೧೨.೨೦೨೩ರಂದು ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಕೆಲವು ಅಧ್ಯಾಪಕರ ಸೇವಾಪೂರ್ವ ಅವಧಿ ಘೋಷಣೆ ಮತ್ತು ಇತರೆ ಸಂಬಂಧಿ ಪರಿಶೀಲನಾ ಉಪಸಮಿತಿ ಸಭೆ ನಡೆಸಿ ಸಲ್ಲಿಸಿದ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. ಉಪಸಮಿತಿಯ ಶಿಫಾರಸ್ಸಿನಂತೆ ಸಂಬಂಧಿಸಿದ ನಾಲ್ಕು ಅಧ್ಯಾಪಕರಾದ ೧. ಡಾ. ವೆಂಕಟಗಿರಿ ದಳವಾಯಿ, ಸಹ ಪ್ರಾಧ್ಯಾಪಕರು, ೨. ಡಾ. ಅಮರೇಶ ಯತಗಲ್, ಸಹ ಪ್ರಾಧ್ಯಾಪಕರು, ೩. ಡಾ. ಶಾಂತಪ್ಪ, ಸಹಾಯಕ ಪ್ರಾಧ್ಯಾಪಕರು, ೪. ಡಾ. ಈ. ಯರ್ರಿಸ್ವಾಮಿ, ಸಹಾಯಕ ಪ್ರಾಧ್ಯಾಪಕರು ಇವರು ಧಾರವಾಡ ಘನ ನ್ಯಾಯಾಲಯದಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿರುದ್ಧ ಹೂಡಿರುವ ವಿವಿಧ ಪ್ರಕರಣಗಳ ಮೊಕದ್ದಮೆಗಳನ್ನು ಹಿಂಪಡೆಯುವ

ಲಿಖಿತ ಹೇಳಿಕೆ ಪತ್ರಗಳನ್ನು ಹಾಗೂ ಒಂದು ಮುಚ್ಚಳಿಕೆ ಪತ್ರವನ್ನು ಕುಲಸಚಿವರ ಕಚೇರಿಗೆ ಸಲ್ಲಿಸುವಂತೆ ದಿನಾಂಕ ೧೫.೧೨.೨೦೨೩ರಂದು ಮಾನ್ಯ ಕುಲಪತಿಗಳ ಅನುಮೋದನೆಯಂತೆ ಪತ್ರವನ್ನು ನೀಡಲಾಯಿತು. ಅದರಂತೆ ಬೋಧಕರು ದಿನಾಂಕ ೧೬.೧೨.೨೦೨೩ರಂದು ಧಾರವಾಡದ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯನ್ನು ಹಿಂಪಡೆಯುವ ಹೇಳಿಕೆ ನೀಡಿ ಪತ್ರವನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಈ ಉಪಸಮಿತಿಯ ವರದಿ ಹಾಗೂ ನಂತರದಲ್ಲಿ ಕೈಗೊಂಡ ಪ್ರಕ್ರಿಯೆಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಈಗಾಗಲೇ ಉಪ ಸಮಿತಿಯ ವರದಿಯಂತೆ ಕೈಗೊಂಡ ಪ್ರಕ್ರಿಯೆಗಳಿಗೆ ಅನುಮೋದನೆ ನೀಡಿತು.

೨೨೩.೧೩ ಹಾಲುಮತ ಅಧ್ಯಯನ ಪೀಠದ ಸಾವದಿ ಠೇವಣಿ ರೂ. ೩೦ ಲಕ್ಷಗಳಿಗೆ ಸಂಗ್ರಹವಾಗಿರುವ ಬಡ್ಡಿ ಮೊತ್ತದಲ್ಲಿ ರೂ. ಐದು ಲಕ್ಷಗಳನ್ನು ಸಾವದಿ ಠೇವಣಿಗೆ ಸೇರಿಸಿ ಠೇವಣಿಯಾಗಿಡುವ ಕುರಿತು.

ಟಿಪ್ಪಣಿ : ದಿನಾಂಕ ೧೯.೧೦.೨೦೨೩ರಂದು ನಡೆದ ಹಾಲುಮತ ಅಧ್ಯಯನ ಪೀಠದ ೨೦೨೩-೨೪ನೇ ಸಾಲಿನ ಸಲಹಾ ಸಮಿತಿ ಸಭೆಯಲ್ಲಿ (ಸಭೆ ನಿರ್ಣಯ ಕ್ರಮ ಸಂಖ್ಯೆ-೮) ನಿರ್ಣಯಿಸಿದಂತೆ ಹಾಲುಮತ ಅಧ್ಯಯನ ಪೀಠದ ಸಾವದಿ ಠೇವಣಿ ರೂ. ೩೦ ಲಕ್ಷಗಳಿಗೆ ಬ್ಯಾಂಕ್‌ನಿಂದ ಸಂಗ್ರಹವಾಗಿರುವ ರೂ. ೧೪ ಲಕ್ಷಗಳ ಬಡ್ಡಿ ಮೊತ್ತದಲ್ಲಿ ರೂ. ಐದು ಲಕ್ಷಗಳನ್ನು ಸಾವದಿ ಠೇವಣಿಗೆ ಸೇರಿಸಿ ಒಟ್ಟು ರೂ. ೩೫ ಲಕ್ಷಗಳನ್ನು ಸಾವದಿ ಠೇವಣಿಯಾಗಿಡಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಸಾವದಿ ಠೇವಣಿ ರೂ. ೩೦ ಲಕ್ಷಗಳಿಗೆ ಬ್ಯಾಂಕ್‌ನಿಂದ ಸಂಗ್ರಹವಾಗಿರುವ ರೂ. ೧೪ ಲಕ್ಷಗಳ ಬಡ್ಡಿ ಮೊತ್ತದಲ್ಲಿ ರೂ. ಐದು ಲಕ್ಷಗಳನ್ನು ಸಾವದಿ ಠೇವಣಿಗೆ ಸೇರಿಸಿ ಒಟ್ಟು ರೂ. ೩೫ ಲಕ್ಷಗಳನ್ನು ಸಾವದಿ ಠೇವಣಿಯಾಗಿಡಲು ಅನುಮೋದನೆ ನೀಡಿತು.

೨೨೩.೧೪ ವಿಶ್ವವಿದ್ಯಾಲಯದ ಅಧಿಕೃತ ಕಾರ್ಯಕ್ರಮಗಳಿಗೆ ಆಗಮಿಸುವ ಅತಿಥಿ/ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಶ್ರೀಶೈಲ ಅತಿಥಿಗೃಹದಲ್ಲಿ ಉಚಿತ ವಸತಿಯನ್ನು ಕಲ್ಪಿಸುವ ಕುರಿತು.

ಟಿಪ್ಪಣಿ : ವಿಶ್ವವಿದ್ಯಾಲಯದ ಅಧಿಕೃತ ಕಾರ್ಯಕ್ರಮಗಳಿಗೆ ಆಗಮಿಸುವ ಅತಿಥಿ/ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಶ್ರೀಶೈಲ ಅತಿಥಿಗೃಹದಲ್ಲಿ ಕೊಠಡಿಗಳು ಲಭ್ಯವಿದ್ದಲ್ಲಿ ಪೂರ್ವಾನುಮತಿ ಪಡೆದು ಅತಿಥಿ/ವಿದ್ವಾಂಸರಿಗೆ ಶ್ರೀಶೈಲ ಅತಿಥಿಗೃಹದಲ್ಲಿ ಉಚಿತವಾಗಿ ವಸತಿಯನ್ನು ಕಲ್ಪಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ವಿಶ್ವವಿದ್ಯಾಲಯದ ಅಧಿಕೃತ ಕಾರ್ಯಕ್ರಮಗಳಿಗೆ ಆಗಮಿಸುವ ಅತಿಥಿ/ ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಶ್ರೀಶೈಲ ಅತಿಥಿಗೃಹದ ಕೊಠಡಿಗಳು ಲಭ್ಯವಿದ್ದಲ್ಲಿ ಪೂರ್ವಾನುಮತಿ ಪಡೆದು ಅತಿಥಿ/ ವಿದ್ವಾಂಸರಿಗೆ ಶ್ರೀಶೈಲ ಅತಿಥಿಗೃಹದಲ್ಲಿ ಉಚಿತವಾಗಿ ವಸತಿಯನ್ನು ಕಲ್ಪಿಸಲು ಅನುಮೋದನೆ ನೀಡಿತು.

೨೨೩.೧೫ ೩೨ನೇ ನುಡಿಹಬ್ಬ/ಘಟಿಕೋತ್ಸವ ಕಾರ್ಯಕ್ರಮದ ಖರ್ಚು ವೆಚ್ಚಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ೩೨ನೇ ನುಡಿಹಬ್ಬ/ಘಟಿಕೋತ್ಸವವು ಸಂಪ್ರದಾಯದಂತೆ ಈವರೆಗೆ ನಡೆದ ಘಟಿಕೋತ್ಸವಗಳ ರೀತಿಯಲ್ಲೇ ಹಣಕಾಸು ವೆಚ್ಚವನ್ನು ಮಾಡಲು ಸಭೆ ಅನುಮೋದನೆ ನೀಡಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು 20.12.23
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು 20/12/23
ಅಧ್ಯಕ್ಷರು